**<u>ಸಾಕ್ಷಿಯನ್ನು ದಿನಾಂಕ 10.06.2026 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ಎನ್ ಕೆ ಡಿ ವಕೀಲರಿಂದಃ</u>**

ನನ್ನ ತಾತನಿಗೆ ಪಿಳ್ಳಪ್ಪ ಮತ್ತು ತಿಮ್ಮಯ್ಯ ಎಂಬ ಇಬ್ಬರು ಮಕ್ಕಳು. ಆ ಪೈಕಿ ನನ್ನ ತಂದೆ ಪಿಳ್ಳಪ್ಪ ಹಿರಿಯ ಮಗ ಎಂದರೆ ಸರಿ. ನನ್ನ ತಾತ ತೀರಿಕೊಂಡ ನಂತರ ನನ್ನ ತಂದೆ ದೊಡ್ಡ ಮಗನಾದ ಕಾರಣ ಮನೆಯ ಯಜಮಾನರು ಆಗಿದ್ದರು ಎಂದರೆ ಸಾಕ್ಷಿಯು ನಮ್ಮ ತಾತನಿಗಿಂತ ಮೊದಲು ನನ್ನ ತಂದೆ ತೀರಿಕೊಂಡಿದ್ದರು ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿಯ ತಂದೆ ತಿಮ್ಮಯ್ಯ ಎಂದಿಗೂ ಮನೆಯ ಯಜಮಾನ ಆಗಿರಲಿಲ್ಲ ಎಂದರೆ ಸರಿಯಲ್ಲ. ಒ ಎಸ್ 138/1994, ಆರ್ ಎ 17/2000 ಸದರಿ ಪ್ರಕರಣಗಳ ವಿಚಾರ 4 ನೇ ಪ್ರತಿವಾದಿಗೆ ಗೊತ್ತಿರಲಿಲ್ಲ ಎಂದರೆ ಸರಿ ಆದರೆ ತಿಮ್ಮಯ್ಯ ಕೇಸು ಹಾಕಿದ್ದರು. ದಾವಾ ಸ್ವತ್ತುಗಳಲ್ಲಿ ನನ್ನ ತಂದೆಗೆ ಅರ್ಧ ಪಾಲು ನನ್ನ ಚಿಕ್ಕಪ್ಪನಿಗೆ ಅರ್ಧ ಪಾಲು ಎಂದರೆ ಸರಿ. ಆದರೆ ಖಾತೆ ತಿಮ್ಮಯ್ಯನ ಹೆಸರಿಗೆ ಇದೆ. ತಿಮ್ಮಯ್ಯನಿಗೆ ಬರಬೇಕಾದ ಅರ್ಧ ಆಸ್ತಿಯಲ್ಲಿ 4 ನೇ ಪ್ರತಿವಾದಿಗೆ 4 ರಲ್ಲಿ 1 ಭಾಗ ಕೊಡಲು ನನಗೇನು ತಕರಾರು ಇಲ್ಲ.

**<u>ಮರುವಿಚಾರಣೆ ಇಲ್ಲಃ</u>**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.